**ಎಸ್.ಸಿ.ಸಂಖ್ಯೆಃ10035/2025**
**ಪ್ರಾ.ಸಾ.ಸಂಖ್ಯೆಃ 5**
**ಚಾ.ಸಾ.ಸಂಖ್ಯೆಃ 10**

**<u>ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ</u>**

**ಎಸ್.ಸಿ.ಸಂಖ್ಯೆಃ 10035/2025**

| | |
|---|---|
| ಹೆಸರುಃ | ನಿಂಗವ್ವ ತಳವಾರ |
| ತಂದೆಯ ಹೆಸರುಃ | ಕರಿಯಪ್ಪ |
| ವಯಸ್ಸುಃ | **28** ವರ್ಷ |
| ಉದ್ಯೋಗಃ | ಒಕ್ಕಲುತನ |
| ವಾಸಃ | ಮಂಟೂರ |

**ಸಾಕ್ಷಿಯನ್ನು ದಿಃ 19.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ-</u>**

**1.** ಈಗ ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯವಿದೆ. ಚಾಸಾ-**1** ನನ್ನ ತಂಗಿ. ಚಾಸಾ-**6** ಹಾಗೂ **7** ನನ್ನ ತಂದೆ ಹಾಗೂ ತಾಯಿ. ಚಾಸಾ-**8** ಹಾಗೂ **9** ನನ್ನ ಸಹೋದರರು. ಚಾಸಾ-**11** ನನ್ನ ತಂಗಿ. ಚಾಸಾ-**12** ಮತ್ತು **13** ನನ್ನ ಸಂಬಂಧಿಕರು ಇರುತ್ತಾರೆ. ಸುಮಾರು ಎರಡು ವರ್ಷಗಳ ಹಿಂದೆ ಚಾಸಾ-**1** ನ್ಯಾಯಾಲಯದ ಮುಂದಿರುವ **1** ನೇ ಆರೋಪಿ ಚೇತನ ಈತನನ್ನು ಪ್ರೀತಿ ಮಾಡುತ್ತಿದ್ದಳು. ನಮ್ಮ ಮನೆಯಲ್ಲಿ ಅವಳ ಪ್ರೀತಿಯನ್ನು ನಮ್ಮ ಹಾಗೂ ಅವರ ಸಮಾಜ ಬೇರೆ ಬೇರೆ ಇರುವುದರಿಂದ ಅದನ್ನು ವಿರೋಧಿಸಿದ್ದು, ಅದನ್ನು ನಿಲ್ಲಿಸಬೇಕೆಂದು ಹೇಳಿದ್ದರು. ಚಾಸಾ-**1** ಆರೋಪಿ ನಂ. **1** ಈತನಿಗೆ ತಮ್ಮ ಪ್ರೀತಿಯನ್ನು ನಿಲ್ಲಿಸೋಣ ಅಂತ ಹೇಳಿದಳು.

**2.** ಅದಾದ ಒಂದು ವಾರದ ನಂತರ ಚಾಸಾ-**1** ಒಂದು ದಿವಸ ತಾನು ಮುಧೋಳದ ಕಾಲೇಜಗೆ ಹೋಗುವಾಗ ಆರೋಪಿತರು ತೊಂದರೆ ಕೊಟ್ಟರು ಅಂತ ಬಂದು ಹೇಳಿದಳು. ನಂತರ ಮತ್ತೆ ನಮ್ಮ ಕುಟುಂಬದವರು ಎಲ್ಲರೂ ಸೇರಿ ಆ ರೀತಿ ತೊಂದರೆ ಕೊಡಲಾರದಂತೆ ತಾಕೀತು ಮಾಡಿದೆವು. ನಾವು ಒಂದು ದಿವಸ ಮನೆಯಲ್ಲಿ ನಮ್ಮ ಕುಟುಂಬದವರೆಲ್ಲರೂ ಮಲಗಿದ್ದಾಗ **1** ನೇ ಆರೋಪಿ ರಾತ್ರಿ ನಮ್ಮ ಮನೆಯ ಬಾಗಿಲಿಗೆ ಬೆಂಕಿ ಹಚ್ಚಿದ್ದ. ಆಗ ರಾತ್ರಿ **12-00** ಗಂಟೆಯಾಗಿತ್ತು. ನಾನು ನೋಡಿ ಸದರಿ ಬೆಂಕಿಯನ್ನು ನಂದಿಸಿದೆ. ನಾನು

**ಎಸ್.ಸಿ.ಸಂಖ್ಯೆ: 10035/2025**
**ಪ್ರಾ.ಸಾ.ಸಂಖ್ಯೆ: 5**
**ಚಾ.ಸಾ.ಸಂಖ್ಯೆ: 10**

ಹೊರಗೆ ಬಂದು ನೋಡಿದಾಗ ಆರೋಪಿ ನಂ. **1** ಚೇತನ ಈತನ ಕೈಯಲ್ಲಿ ಬಾಟಲಿ ಇತ್ತು. ನಾನು ಯಾಕೆ ಬೆಂಕಿಯನ್ನು ಹಚ್ಚಿದೆ ಅಂತ ಕೇಳಿದಾಗ ಆರೋಪಿ ನಂ. **1** ನನಗೆ ಚಾಸಾ-**1** ಪ್ರೀತಿ ಮಾಡದೇ ಇದ್ದುದ್ದರಿಂದ ಬೆಂಕಿ ಹಚ್ಚಿದೆ ಅಂತ ಹೇಳಿದನು. ನಂತರ ನನ್ನ ತಂದೆ ಹಿರಿಯರಾದ ಲಕ್ಷ್ಮಣ ಚಾಸಾ-**15,** ರವಿ ತಳವಾರ ಚಾಸಾ-**16,** ಕರಿಯಪ್ಪ ಚಾಸಾ-**13** ಇವರೆಲ್ಲರೂ ಹೋಗಿ ಆರೋಪಿ ನಂ. **1** ಹಾಗೂ **2** ಇವರಿಗೆ ತಿಳುವಳಿಕೆ ಹೇಳಿದ್ದರು. ನಂತರ ನಮ್ಮ ಸಮಾಜದವರು ಆರೋಪಿ ನಂ. **1** ಈತನನ್ನು ಊರು ಬಿಡಿಸಿ ಕಳುಹಿಸಿದ್ದರು.

**3.** ನಂತರ ಚಾಸಾ-**1** ಮಹಾದೇವಿ ಮುಧೋಳದಲ್ಲಿಯ ಒಂದು ಬಟ್ಟೆಯ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದಳು. **1** ನೇ ಆರೋಪಿತನು ಅಲ್ಲಿಗೂ ಕೂಡ ಬಂದು ಚಾಸಾ-**1** ಇವಳಿಗೆ ತನ್ನನ್ನು ಮದುವೆಯಾಗು ಅಂತ ಪೀಡಿಸಿದ ಅಂತ ಚಾಸಾ-**1** ನಮಗೆ ತಿಳಿಸಿದಳು. ಅದಾದ ಸುಮಾರು ಒಂದು ತಿಂಗಳ ನಂತರ ನಮ್ಮ ಕುಟುಂಬದವರೆಲ್ಲರೂ ಅಂದರೆ ನಾನು, ಚಾಸಾ-**1, 11, 12** ರವರು ಮನೆಯ ಮುಂದಿನ ಅಂಗಳದಲ್ಲಿ ಮಲಗಿಕೊಂಡಿದ್ದೆವು. ಸುಮಾರು ರಾತ್ರಿ **12-00** ಗಂಟೆಯ ಸಮಯದಲ್ಲಿ **1** ನೇ ಆರೋಪಿ ಚೇತನ ಅಲ್ಲಿಗೆ ಬಂದ. ಆತನ ಕೈಯಲ್ಲಿ ಕಲ್ಲಿತ್ತು. ನಾನು ಹಲ್ಲೆ ಮಾಡಬಹುದು ಅಂತ ಯೋಚಿಸಿದೆ. ನಮ್ಮ ಮನೆಯವರು ಎಲ್ಲರೂ ಎಚ್ಚರಗೊಂಡರು. ಅವನು ಕಲ್ಲು ಚಾಸಾ-**1** ರವರ ಮಗ್ಗಲು ಬಿತ್ತು. ಮತ್ತೆ ಬರುವುದಿಲ್ಲ ಅಂತ ತಿಳಿದು ಸುಮ್ಮನಾದೆವು.

**4.** ನಂತರ ಚೇತನ ಮತ್ತೆ ಬಂದು ನಾವು ಬಿಡಿಸಿಕೊಳ್ಳಲು ಪ್ರಯತ್ನಿಸಿದರೂ ಬಿಡದೆ ಕಲ್ಲು ತೆಗೆದುಕೊಂಡು ಚಾಸಾ-**1** ಮಹಾದೇವಿಗೆ ತಲೆ ಬಲಗಣ್ಣಿನ ಕಡೆಗೆ ಹೊಡೆದ. ಚಾಸಾ-**9** ಅವನನ್ನು ಹಿಡಿಯಲು ಹೋಗುವಷ್ಟರಲ್ಲಿ ಆರೋಪಿ ಅನೀಲ ಆತನನ್ನು ಮೋಟಾರ್ ಸೈಕಲ ಮೇಲೆ ಕರೆದುಕೊಂಡು ಹೋದ. ನಂತರ ಅವಳನ್ನು ಲಕ್ಷ್ಮಣ ಉಳ್ಳಾಗಡ್ಡಿ ಚಾಸಾ-**17** ಇವರ ಕಾರನಲ್ಲಿ ಮುಧೋಳದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು. ಅಲ್ಲಿ ಅವಳ ಗಾಯಕ್ಕೆ ಹೊಲಿಗೆ ಹಾಕಿ ಇಂಜೆಕ್ಷನ ಮಾಡಿದರು. ಹೆಚ್ಚು ಗಾಯವಾಗಿದೆ ಅಂತ ಅವಳನ್ನು ಮುಧೋಳದಿಂದ ಕೆರೂಡಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಹೇಳಿದರು. ನಾವು ಅವಳನ್ನು

**ಎಸ್.ಸಿ.ಸಂಖ್ಯೆ: 10035/2025**
**ಪ್ರಾ.ಸಾ.ಸಂಖ್ಯೆ: 5**
**ಚಾ.ಸಾ.ಸಂಖ್ಯೆ: 10**

ಬಾಗಲಕೋಟೆಯ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ ಚಾಸಾ-**1** ರವರು **10** ದಿನಗಳ ಕಾಲ ಚಿಕಿತ್ಸೆ ಪಡೆದಿದ್ದಾಳೆ. ಈಗ ನೋಡುತ್ತಿರುವ ಮುಮಾ-**2** ಆರೋಪಿ ನಂ. **1** ಚಾಸಾ-**1** ಇವರಿಗೆ ಹೊಡೆಯಲು ಉಪಯೋಗಿಸಿದ ಕಲ್ಲು ಇರುತ್ತದೆ. ಮುಮಾ-**1** ಅವಳ ರಕ್ತ ಹತ್ತಿದ ಚೂಡಿದಾರ ಟಾಪ್ ಹಾಗೂ ಮುಮಾ-**3** ರಕ್ತ ಹತ್ತಿದ ದಿಂಬು ಇರುತ್ತದೆ. ನಾನು ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ.

**<u>ಪಾಟಿಸವಾಲು: 1 & 2ನೇ ಆರೋಪಿ ಪರ ಶ್ರೀ.ಎ.ಎಸ್.ಎಸ್. ವಕೀಲರಿಂದ:</u>**

**1.** ನನಗೆ ಮದುವೆಯಾಗಿಲ್ಲ. ಚಾಸಾ-**1** ಹಾಗೂ ಆರೋಪಿ ನಂ. **1** ಪ್ರೀತಿ ಮಾಡುವ ವಿಷಯ ನಮಗೆ ಎರಡು ವರ್ಷಗಳ ನಂತರ ಗೊತ್ತಾಯಿತು. ಘಟನೆ ನಡೆದಿದೆ ಅಂತ ಹೇಳುವ ದಿವಸ ಅಂಗಳದಲ್ಲಿ ನಾನು, ಚಾಸಾ-**1,** ಸುರೇಖಾ, ಲಕ್ಕವ್ವಚಾಸಾ-**11,** ಹಾಗೂ ಮಂಜು ಚಾಸಾ-**9** ಮಲಗಿದ್ದೆವು. ಇವರ ಹೊರತಾಗಿ ಬೇರೆ ಯಾರೂ ಅಲ್ಲಿ ಮಲಗಿರಲಿಲ್ಲ. ನಾನು ಆರೋಪಿ ನಂ. **1** ಬರುವುದನ್ನು ನೋಡಿ ಉಳಿದವರನ್ನು ಎಬ್ಬಿಸಿದೆ. ಆ ದಿನ ಆರೋಪಿ ನಂ. **1** ಕಪ್ಪು ಗೆರೆ ಇರುವ ಬಿಳಿ ಬಣ್ಣದ ಅಂಗಿಯನ್ನು ಹಾಕಿಕೊಂಡದ್ದ. ನಾನು ಆರೋಪಿ ನಂ. **1** ಈತನನ್ನು ಆ ದಿವಸ ನೋಡಿಯೇ ಇಲ್ಲ ಎಂದರೆ ಸರಿಯಲ್ಲ. ನಾನು ಸುಮಾರು **10** ಅಡಿ ದೂರದಿಂದ ಆತನನ್ನು ನೋಡಿದೆ. ಆರೋಪಿ ನಂ. **1** ಮೊದಲ ಬಾರಿ ಬಂದಾಗಲೂ ಸಹ ಆತನ ಕೈಯಲ್ಲಿ ಕಲ್ಲು ಇತ್ತು. ಆಗ ಕಲ್ಲು ಒಗೆಯಲಿಲ್ಲ ಎಂಬ ಸೂಚನೆಗೆ ಸಾಕ್ಷಿದಾರರು ಮೊದಲು ಇಲ್ಲ ಅಂತ ಹೇಳಿ ಆ ನಂತರ " ಅದು ಮಗ್ಗುಲಲ್ಲಿ ಬಿತ್ತು" ಅಂತ ಹೇಳುತ್ತಾರೆ.

**2.** ಚಾಸಾ-**1** ಮಹಾದೇವಿ ಇವಳ ಎಡ ಪಕ್ಕದಲ್ಲಿ ಲಕ್ಕವ್ವ ಚಾಸಾ-**11** ಮಲಗಿದ್ದಳು. ಕಲ್ಲು ಚಾಸಾ-**1** ಇವರ ಬಲಗಡೆ ಬಿತ್ತು. ಆಗ ನಮಗೆ ಎಚ್ಚರವಾಗಿ ಮೇಲೆ ಎದ್ದೆವು. ನಾವು ಅವನನ್ನು ಹಿಡಿಯಲು ಪ್ರಯತ್ನಿಸಲಿಲ್ಲ. ಎರಡನೇಯ ಬಾರಿ ಆರೋಪಿ ನಂ. **1** ಅದೇ ಕಲ್ಲನ್ನು ತೆಗೆದುಕೊಂಡು ಬಂದು ಒಗೆದ. ಮುಮಾ-**2** ರಂತಹ ಕಲ್ಲುಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ.

**ಎಸ್.ಸಿ.ಸಂಖ್ಯೆ: 10035/2025**
**ಪ್ರಾ.ಸಾ.ಸಂಖ್ಯೆ: 5**
**ಚಾ.ಸಾ.ಸಂಖ್ಯೆ: 10**

**3.** ನಾವು ಆಸ್ಪತ್ರೆಗೆ ನಾಲ್ಕು ಜನ ಹೋದೆವು. ಆ ದಿನ ನಾನು, ಚಾಸಾ-**1**, ಚಾಸಾ-**9** ಮಂಜು, ಚಾಸಾ-**11** ಲಕ್ಕವ್ವ ಹಾಗೂ ಕಾರಿನ ಚಾಲಕ ಹೋದೆವು. ನಮ್ಮನ್ನು ಹೊರತುಪಡಿಸಿ ಆಗ ಯಾರೂ ಆಸ್ಪತ್ರೆಗೆ ಬರಲಿಲ್ಲ. ಕೆರೂಡಿ ಆಸ್ಪತ್ರೆಗೆ ಚಾಸಾ-**12** ಹಾಗೂ **13** ರೂಪಾ ಮತ್ತು ಕರಿಯಪ್ಪ ಹೋಗಿದ್ದರು. ಚೇತನ ಬಾಗಿಲಿಗೆ ಬೆಂಕಿ ಹಚ್ಚಿದ್ದ ಅಂತ ಹೇಳುವ ದಿವಸ ನಾವು ಮನೆಯ ಒಳಗಡೆ ಮಲಗಿದ್ದೆವು. ನಾನು ಆರೋಪಿ ನಂ. **1** ಬೆಂಕಿ ಹಚ್ಚುವುದನ್ನು ನಾನು ನೋಡಿಲ್ಲ.

**4.** ಚಾಸಾ-**1** ಕೆಲಸ ಮಾಡುತ್ತಿದ್ದ ಅಂಗಡಿಯ ಹೆಸರು ಗೊತ್ತಿಲ್ಲ. ಚಾಸಾ-**1** ಕೆಲಸ ಮಾಡುತ್ತಿದ್ದಳು ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚೇತನ ಚಾಸಾ-**1** ಇವಳಿಗೆ ಕಲ್ಲು ಒಗೆದ ಅಂತ, ಅದರಿಂದ ಅವಳಿಗೆ ರಕ್ತ ಗಾಯವಾಗಿತ್ತು ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-**1** ಬಿದ್ದು ಗಾಯಗೊಂಡಿದ್ದಾಳೆ ಎಂದರೆ ಸರಿಯಲ್ಲ. ನಮ್ಮ ಕುಟುಂಬ ಹಾಗೂ ಆರೋಪಿ ನಂ. **1** ಇವರ ಕುಟುಂಬದ ನಡುವೆ ಜಗಳ ಇದ್ದುದ್ದರಿಂದ ನಾವು ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿಸವಾಲು: 3 ರಿಂದ 5ನೇ ಆರೋಪಿ ಪರ ಶ್ರೀ. ಎಸ್.ಜಿ.ಸಿ. ವಕೀಲರಿಂದ:**

**1.** ಆರೋಪಿ ನಂ. **1** ಚಾಸಾ-**1** ಇವರಿಗೆ ಬೆದರಿಕೆ ಹಾಕಿದ ಅಂತ ಹೇಳುವ ಸಂದರ್ಭದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ. ಆ ಬಗ್ಗೆ ಮಹಾದೇವಿ ಹೇಳಿದ್ದರಿಂದ ನಾನು ಸಾಕ್ಷಿ ಹೇಳುತ್ತಿದ್ದೇನೆ. ಮಹಾದೇವಿ ಚಾಸಾ-**1** ಇವರಿಗೆ ಕಲ್ಲು ಒಗೆದರು ಅಂತ ಹೇಳುವ ಸಮದಯಲ್ಲಿ ರಾತ್ರಿ **12** ರಿಂದ **12-30** ಗಂಟೆಯಾಗಿತ್ತು. ಘಟನಾ ಸ್ಥಳದಿಂದ ರಸ್ತೆ ಸುಮಾರು **25-30** ಅಡಿ ಅಗಲವಿದೆ. ರಸ್ತೆಯ ಹಿಂದಿನ ಭಾಗ ನಮಗೆ ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. ರಾತ್ರಿಯಾಗಿದ್ದರಿಂದ ಯಾರು ಬಂದರು ಯಾರು ಹೋದರು ಅಂತ ನಮಗೆ ಗೊತ್ತಾಗುತ್ತಿರಲಿಲ್ಲ ಎಂದರೆ ಸರಿಯಲ್ಲ.

**ಎಸ್.ಸಿ.ಸಂಖ್ಯೆ: 10035/2025**
**ಪ್ರಾ.ಸಾ.ಸಂಖ್ಯೆ: 5**
**ಚಾ.ಸಾ.ಸಂಖ್ಯೆ: 10**

**2.** ನಾನು ಚೇತನ ಓಡಿ ಹೋಗುವುದನ್ನು ನೋಡಿದ್ದೇನೆ. ನಾನು ಆರೋಪಿ ಅನೀಲ ಅಲ್ಲಿರುವುದನ್ನು ನೋಡಿಲ್ಲ. ನಾನು ಯಾವುದೇ ಘಟನೆಯನ್ನು ನೋಡಿಲ್ಲ ಎಂದರೆ ಸರಿಯಲ್ಲ. ನನಗೆ ಘಟನೆಯ ಬಗ್ಗೆ ಯಾವುದೇ ವಿವರಗಳು ಪ್ರತ್ಯಕ್ಷ್ಯ ಮಾಹಿತಿ ಇಲ್ಲದೇ ಇದ್ದರೂ ಕೂಡ ಈಗ ಚಾಸಾ-**1** ಇವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಳಿದಂತೆ ಮೇಲಿನ ಪಾಟಿಸವಾಲನ್ನು ಅಳವಡಿಸಿಕೊಳ್ಳುತ್ತಾರೆ.)

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**